# ವೇದಿಕೆ ಒಂದು, ಕಲೆಗಳು ನೂರಾರು, ಕಲಾಪ್ರಿಯರಿಗೆ ಹೂರಣ!

ಓರ್ವ ವ್ಯಕ್ತಿ ಇತರರ ನಡುವೆ ಭಿನ್ನವಾಗಿ ಕಾಣಿಸಿಕೊಳ್ಳಲು ಆತನಲ್ಲಿರುವ ಕಲೆಯಿಂದ ಮಾತ್ರ ಸಾಧ್ಯ. ಕಲೆಯೆಂಬುದು ವ್ಯಕ್ತಿಗೆ ಕಲಾವಿದ ಎಂಬ ಬಿರುದು ತಂದು ಕೊಡುತ್ತದೆ. ಕಲೆ ಎನ್ನುದು ಕೇವಲ ಒಂದು ವಿಷಯಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಚಿತ್ರಕಲೆ, ಛಾಯಾಗ್ರಹಣ, ಶಿಲ್ಪಕಲೆ ಹೀಗೆ ಕಲೆಯಲ್ಲಿ ಹಲವು ಮಾದರಿಗಳಿವೆ. ಈ ಎಲ್ಲ ಬಗೆಯ ಕಲೆಗಳನ್ನು ಒಂದೇ ವೇದಿಕೆಯಲ್ಲಿ ಪ್ರದರ್ಶಿಸುವ ಮೂಲಕ ಕಲಾಪ್ರಿಯರ ಮನತಣಿಸುವ ಉದ್ದೇಶದಿಂದ ಕಲಾ ಮೇಳವೊಂದನ್ನು ಹಮ್ಮಿಕೊಳ್ಳಲಾಗಿದೆ. ಅದುವೇ "ಆರ್ಟ್ ಬೆಂಗಳೂರು-2015".

ಪ್ರೆಸ್ಟೀಜ್ ಸಮೂಹ ಮತ್ತು ಯೆಸ್ ಬ್ಯಾಂಕ್ ಸಹಯೋಗದಲ್ಲಿ ಯುಬಿ ಸಿಟಿಯ ದಿ ಕಲೆಕ್ಷನ್ ಹಾಗೂ ಸಬ್‌ಲೈಮ್ ಗೆಲ್ಲೇರಿಯಾ ವತಿಯಿಂದ ಆಯೋಜಿಸಲಾಗುತ್ತಿರುವ 6ನೇ ಆವೃತ್ತಿಯ ಕಲಾ ಮೇಳ ಇದಾಗಿದೆ. ಮೇಳದಲ್ಲಿ ವಿಶ್ವದ ವಿವಿಧ ವಿಶೇಷ ಕಲಾವಿದರನ್ನು ಪರಿಚಯಿಸುವ ಪ್ರಯತ್ನ ಮಾಡಲಾಗುತ್ತಿದೆ.

ಭಾರತೀಯ ಕಲಾ ಮಾರುಕಟ್ಟೆಯು ಉತ್ತಮ ಗುಣಮಟ್ಟದ ಹಾಗೂ ವಿವೇಚನಾ ಶಕ್ತಿಯುಳ್ಳ ಖರೀದಿದಾರರನ್ನು ಹೊಂದಿದೆ. ಜಾಗತೀಕ ಮಟ್ಟದಲ್ಲಿಯೂ ಸಹ ಕಲೆಯೆಂಬುದು ಪರ್ಯಾಯ ಹೂಡಿಕೆಗೆ ಆಯ್ಕೆಯಾಗುತ್ತಿದೆ. ಈ ನಿಟ್ಟಿನಲ್ಲಿ ಈ ಬಾರಿಯ ಕಲಾ ಮೇಳ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕಲಾಚರಣೆಗೆ ಸಾಕ್ಷಿಯಾಗಲಿದೆ. "ಆರ್ಟ್ ಬೆಂಗಳೂರು" ಮೇಳದಲ್ಲಿ 30ಕ್ಕೂ ಅಧಿಕ ಶಿಲ್ಪ ಕಲೆಗಳು, ವಿನೂತನ ವಿನ್ಯಾಸದ ಡೈನಿಂಗ್ ಟೇಬಲ್‌ಗಳು, ಆಕರ್ಷಕ ಅಲಂಕಾರಿಕ ವಸ್ತುಗಳು, ಚಿತ್ರಕಲೆಗಳು, ಛಾಯಾಚಿತ್ರಗಳು ಸೇರಿದಂತೆ ವಿವಿಧ ಮಾದರಿಯ ಕಲಾ ಪ್ರಕಾರಗಳು ಕಲಾ ರಸಿಕರನ್ನು ಸೆಳೆಯಲಿವೆ. ಅತ್ಯಾಧುನಿಕ ಕಲಾ ದೀಪಗಳು, ಮ್ಯಾಪಿಂಗ್ ಶೋಗಳು ಮೇಳದ ಮೆರುಗನ್ನು ಮತ್ತಷ್ಟು ಹೆಚ್ಚಿಸಲಿವೆ.



ಕಲಾ ಇತಿಹಾಸಕಾರ ಜಯರಾಂ ಮೇಳದ ಬಗ್ಗೆ ಸಮಗ್ರ ಮಾಹಿತಿ ನೀಡಲಿದ್ದಾರೆ. ಅಲ್ಲದೇ, ಇನ್ನಿತರ ಕಲಾ ಮಾರ್ಗದರ್ಶಕರವು ಪ್ರದರ್ಶನದಲ್ಲಿನ ಕಲಾಪ್ರಕಾರಗಳ ಬಗ್ಗೆ ವಿವರಣೆ ನೀಡಲಿದ್ದಾರೆ. ಪ್ರದರ್ಶನದಲ್ಲಿ ರಾಷ್ಟ್ರದ ಕಲಾವಿದರಾದ ಆರತಿ ಕರ್ವಾಯುನ್, ಆದಿಲ್ ರೈಟರ್, ಐಶ್ವರ್ಯನ್, ಭರತೇಶ್ ಜೆಡಿ, ಚಿನರ್ ಷಾ, ಕ್ಲೇರ್ ಅರ್ನಿ, ದೇವಿ ಪ್ರಿಯ ವಿಮಲ್‌ನಾಥನ್, ದೀಪ್ತಿ ದೇಸಾಯಿ ಸೇರಿದಂತೆ ಅನೇಕ ಕಲಾವಿದರು ಭಾಗವಹಿಸಲಿದ್ದಾರೆ.

ಅಷ್ಟೇ ಅಲ್ಲ, ಕೆನಡಾದ ಕೆವಿನ್ ಕೆಲ್ಲಿ, ಬೀಜಿಂಗ್‌ನ ಲಿ ಹಾಂಗ್ಬೊ, ಫ್ರಾನ್ಸ್‌ನ ನಿಕೊಲಸ್ ಕ್ಲಾಸ್ ಮತ್ತು ಇನ್ನಿತರ ಕಲಾವಿದರೂ ತಮ್ಮ ಕೈಚಳಕ ಪ್ರದರ್ಶಿಸಲಿದ್ದಾರೆ. ಈ ಅಪರೂಪದ ಕಲಾ ಮೇಳ ಆಗಸ್ಟ್ 21 ರಿಂದ 30ರವರೆಗೆ ನಡೆಯಲಿದೆ. ಕಲಾಸಕ್ತರು ಮೇಳದ ಲಾಭ ಪಡೆದುಕೊಳ್ಳಬಹುದಾಗಿದೆ.





